ದಿನಾಂಕ: **04.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ **KGM** ವಕೀಲರಿಂದ

ದಾವಾಸ್ವತ್ತು ಗ್ರಾಮ ಠಾಣಾ ಸ್ವತ್ತು ಎಂದರೆ ಸರಿ. 2022 ನೇ ಇಸವಿಯಲ್ಲಿ ಗ್ರಾಮ ಠಾಣಾ ಸ್ವತ್ತನ್ನು ಪ್ರತಿವಾದಿ ಪಂಚಾಯಿತಿಯವರು ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ನಾನು ಸಹ ಹಾಜರಿದ್ದೆನು ಎಂದರೆ ಸರಿ. ಸದರಿ ಸರ್ವೆ ನಕ್ಷೆಯಲ್ಲಿ ನಾಲ್ಕು ಬ್ಲಾಕ್ ಗಳನ್ನು ಮಾಡಿ ನಾಲ್ಕು ಬ್ಲಾಕ್ ಗಳನ್ನು ನಾಲ್ಕು ಜನ ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಮೂರನೇ ಬ್ಲಾಕ್ ಲ್ಲಿ 24 ಗುಂಟೆಯನ್ನು ನಾನು ಒತ್ತುವರಿ ಮಾಡಿರುತ್ತೇನೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನ ಪಕ್ಕದಲ್ಲಿ ಖಾಸಗಿ ಜಮೀನುಗಳಾದ ಸರ್ವೆ ನಂಬರ್ 63, 64, 65 ಮತ್ತು 66 ಬರುತ್ತದೆ ಎಂದರೆ ಸರಿ. ದಾವಸ್ವತ್ತಿನ ಪೂರ್ವ ಭಾಗದಲ್ಲಿ ನನ್ನ ಖಾಸಗಿ ಜಮೀನಾದ ಸರ್ವೆ ನಂಬರ್ 65/2 ರ 4 ಗುಂಟೆ ಜಮೀನು ಬರುತ್ತದೆ ಎಂದರೆ ಸರಿ. ಸರ್ವೆ ನಂಬರ್ 65/2 ರ ಪೂರ್ವ ದಿಕ್ಕಿನಲ್ಲಿ ಆರಗ ದಿಂದ ಅರಳಸುರಳಿ ಗ್ರಾಮಕ್ಕೆ ಹೋಗುವ ಟಾರ್ ರಸ್ತೆ ಬರುತ್ತದೆ ಎಂದರೆ ಸರಿ. ಟಾರ್ ರಸ್ತೆಯ ಪೂರ್ವ ದಿಕ್ಕಿನಲ್ಲಿ ಸರ್ವೆ ನಂಬರ್ 3 ರಲ್ಲಿ ಕೆರೆ ಬರುತ್ತದೆ ಎಂದರೆ ಸರಿ. ದಾವಾಸ್ವತ್ತು ಕೆರೆಯ ಅಂಗಳದಲ್ಲಿ ಬರುತ್ತದೆ ಎಂದು ಸರ್ವೆ ವರದಿಯಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಜಮೀನಾದ ಸರ್ವೆ ನಂಬರ್ 65/2 ಕ್ಕೆ ಓಡಾಡಲು ಆರಗ ಅರಳಸುರಳಿ ಗ್ರಾಮದ ಟಾರ್ ರಸ್ತೆಯ ಮುಖಾಂತರ ಹೋಗಬಹುದು ಎಂದರೆ ಸಾಕ್ಷಿಯು ಸದರಿ ಟಾರ್ ರಸ್ತೆಯಿಂದ ನನ್ನ ಜಮೀನಿಗೆ ಹೋಗಲು ದಾವಾಸ್ವತ್ತಿನ ಮುಖಾಂತರವೇ ಹೋಗಬೇಕಾಗುತ್ತದೆ ಬೇರೆ ರಸ್ತೆ ಇಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಮುಖಾಂತರ ನನ್ನ ಹಾಸಗಿ ಸ್ವತ್ತಿಗೆ ಹೋಗಬೇಕಾದ ಅಗತ್ಯ ಇರುವುದಿಲ್ಲ ಸದರಿ ಸ್ವತ್ತಿಗೆ ಟಾರ್ ರಸ್ತೆಯು ಮುಖಾಂತರವೇ ಹೋಗಲು ಸಾಧ್ಯವಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ಆದ ನಂತರ ತಹಶೀಲ್ದಾರ್ ರವರು ತಾಲ್ಲೂಕು ಪಂಚಾಯಿತಿ EO ರವರಿಗೆ ಕೆರೆಯ ಅಂಗಳವನ್ನು ಒತ್ತುವರಿ ಮಾಡಿರುವುದಿಲ್ಲ ತೆರವುಗೊಳಿಸುವಂತೆ ಪತ್ರ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಗ್ರಾಮ ಪಂಚಾಯಿತಿಯವರು ನನ್ನನ್ನು ಸೇರಿ ಇತರ ನಾಲ್ಕು ಜನ ಒತ್ತುವರಿ ದಾರರಿಗೆ ಒತ್ತುವರಿಯನ್ನು ತೆರವುಗೊಳಿಸುವಂತೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸಾಕ್ಷಿಯು

ಬಾಯಿ ಮುಖಾಂತರ ತಿಳಿಸಿರುತ್ತಾರೆ  ಲಿಖಿತವಾಗಿ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಒತ್ತುವರಿ ತೆರವುಗೊಳಿಸುವುದನ್ನು  ಮೊಟಕುಗೊಳಿಸಲು ನಾನು ಉದ್ದೇಶಪೂರ್ವಕವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನಗೆ ನೊಟೀಸ್ ನೀಡಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಯವುದೇ ಬೆಳೆ ಇರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಒಕ್ಕಲು ಕಣ ಮತ್ತು ರಸ್ತೆ ಇದೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ.

ಮುಂದುವರೆದ ವಾದಿ ಪರ ವಿಚಾರಣೇ ಇಲ್ಲ ಎಂದು ವಾದಿ ಪರ ವಕೀಲರು ನುಡಿದಿರುತ್ತಾರೆ .

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ